ಕೊಂಡವಧಿಯದು ಬಳಿಸಾರಿದತ್ತೊಯ್ಯನೆ.

ಎಂದು ಆ ನೀರೆ ಸ್ವರ ಸರಸ್ಸಿನ ಲೀಲೆಯಲ್ಲಿ ಮಧುರ ವಾಙ್ಮಧುಧಾರೆಯನ್ನು ಹರಿಸುತ್ತ, ಫಾಲ್ಗುಣ ತಾರೆಯಂತೆ ಶೋಭಿಸುತ್ತಿದ್ದಳು. ಕುಂತಿಯ ಪುತ್ರನು ಅವಳ ಸವಿದನಿಯ ಗಾನದಾನಂದದ ವೈತರಣಿ ನದಿಯಲ್ಲಿ ಮುಳುಗಿ ಕಾಡೇ ತೂಗಾಡುವಂತೆ ಮೈ ಮರೆತನು! ಚೈತ್ರವಾಹಿನಿಯು ಹೀಗೆ ತಾನು ಯಾರು ಎನ್ನುವುದನ್ನೆ ರಟ್ಟು ಮಾಡದೆ ಫಲ್ಗುಣನೊಡನೆ ಕ್ರೀಡಿಸುತ್ತ ಸುಖದಲ್ಲಿದ್ದಳು. ಆಗ ಕಬ್ಬಿನಜಲ್ಲೆಯ ಕೋದಂಡ ಹಿಡಿದ ಮನ್ಮಥನಿಂದ ಪಡೆದುಕೊಂಡಿದ್ದ ಅವಧಿ ಮೆಲ್ಲನೆ ಮೃದುವಾಗಿ ಬಳಿಗೆ ಬಂದಿತು.

ಹಾಗೆಯೆ ಒಂದು ದಿನ ದಿವಸದ ಮುಕ್ತಾಯದ ಸಮಯದಲ್ಲಿ ಚಿತ್ರಾಂಗಿಯು ಫಲ್ಗುಣನೊಡಗೂಡಿ ಬನದ ಹೂಗಳನ್ನು ಬಿಡಿಸುತ್ತ ಇನಿಯನನ್ನು ಅಲಂಕರಿಸುತ್ತಿದ್ದಳು. ಹಣ್ಣುಗಳನ್ನು ಆಯ್ದು ಕುಯ್ದು ತಿನ್ನಲು ಕೊಡುತ್ತಿದ್ದಳು. ಕ್ರೀಡಾ ವಿನೋದ ದಿಂದ ಹೂವು ಬಿಟ್ಟು ವಿಸ್ತಾರವಾಗಿ ಹಬ್ಬಿದ ಬಳ್ಳಿಗಳನ್ನು ತೆಗೆದುಕೊಂಡು, ವ್ರತಿಪತಿಯ ಸೊಂಟಕ್ಕೆ ನಡುಪಟ್ಟಿಯನ್ನು ರಚಿಸಿ ತೊಡಿಸುತ್ತಿದ್ದಳು. ಸಾರಸ (ಕಮಲ) ವದನೆಯು ನಾಚಿಕೆಯಿಂದ ಹೂ ಮುಡಿಸುತ್ತ ಸರಸ ವಾಡುತ್ತಿದ್ದಳು. ಆ ರಸಲಹರಿ ಲೀಲೆಯಲ್ಲಿ ಮೆಲ್ಲ ಮೆಲ್ಲನೆ ಹತ್ತಿರದ ಪರ್ವತದ ಎತ್ತರದ ತುದಿಗೆ ಏರಿದಳು.

ಪತಿಗೆ ರಮಣೀಯ ದೃಶ್ಯ ವೈಶಾಲ್ಯವನ್ನು ತೋರಿಸಿದಳು: ಗಿರಿಯೊಡನೆ ಗಿರಿ, ಕಾಡಿನೊಡನೆ ಕಾಡು, ಬೆಟ್ಟಕ್ಕೆ ಎದುರಾದ ಕಾನನ, ಕಾಂತಾರಕ್ಕೆ ಸಮ್ಮುಖವಾದ ಪರ್ವತ ಪಂಕ್ತಿ. ಅವು ವರ್ಧಿಸುತ್ತ, ಸ್ಪರ್ಧಿಸುತ್ತ ದೂರ ಗಗನದ ಅಂಚಿನವರೆಗೆ ಅತಿಶಯವಾಗಿ ಹರಡಿ ದೃಷ್ಟಿ ಸೀಮೆಯಲ್ಲಿ ಮೆರೆದಿದ್ದವು. ಅರ್ಜುನನು ನಿಟ್ಟುಸಿರು ಬಿಡುತ್ತ ಅದನ್ನು ನೋಡುತ್ತ, ಖಿನ್ನತೆಯ ಭಾರದಿಂದ ಬಾಗುತ್ತ, ಕುಬೇರನ ಉತ್ತರ ದಿಕ್ಕಿನ ಕಡೆ ಬಿಟ್ಟಕಣ್ಣು ಬಿಟ್ಟಂತೆ ನೋಡುತ್ತ ಮೌನವಾಗಿದ್ದನು. ಅದನ್ನು ಕಂಡು ಕಾತರಳಾದ ಚಿತ್ರೆ ಸಕರುಣ ಧ್ವನಿಯಿಂದ ಹೀಗೆ ಹೇಳಿದಳು:

'ಓ ನನ್ನ ಪ್ರಾಣ ಪ್ರಭುವೆ, ಪಶ್ಚಿಮ ದಿಕ್ತಟದಲ್ಲಿ ಶೂನ್ಯ ಚುಂಬಿತ ಪರ್ವತದ ತುದಿಯತ್ತ ತಿರುಗು. ಅಲ್ಲಿ ಸೂರ್ಯನ ಸುತ್ತಲೂ ಹೊಳೆಯುವ ಬಂಗಾರದ ಪ್ರಭಾವಲಯವು ದಿಗಂತರೇಖೆಯನ್ನು ಗರಗಸದಿಂದ ಕೊಯ್ದಂತೆ ಕೆಂಪಾಗಿ, ಮೆಟ್ಟಿ ನಿಂತು ಶೋಭಿಸುತ್ತಿದೆ. ಅದನ್ನು ನೋಡದೆ, ನೀನು ಏತಕ್ಕೆ ಉತ್ತರ ದಿಕ್ಕಿನತ್ತ ಚಿತ್ತವನ್ನು ನೆಟ್ಟಿರುವೆ? ನೆಟ್ಟ ನೋಟದಿಂದ ಏನನ್ನು ಆಲೋಚಿಸುತ್ತಿರುವೆ ಹೇಳು?'

ಆ ಮಾತಿಗೆ ಇಂದ್ರಜನು ನಲ್ಲೆಯ ಕೆನ್ನೆಯನ್ನು ಬೆರಳ ಚಿಗುರಿನಿಂದ ಸವರುತ್ತ ಹೀಗೆ ಮಾರುತ್ತರ ನೀಡಿದನು :

'ಹೃದಯೇಶ್ವರಿ, ನೀನು ನನ್ನನ್ನು ಇಲ್ಲಿಗೆ ಏತಕ್ಕೆ ಕರೆದುಕೊಂಡು ಬಂದೆ; ಅಯ್ಯೊ, ಈ ಎತ್ತರಕ್ಕೆ ಮತ್ತು ಈ ಬಿತ್ತರಕ್ಕೆ? ಆ ಕಂದರದ ಸಂಕುಚಿತ ಜೀವನವೆ ಸುಖಮಯವಾಗಿತ್ತು. ಅಲ್ಲಿ ನಿನ್ನೊಡನಿದ್ದು ವಿಸ್ತೃತ ಪ್ರಪಂಚವಿದು ಇದೆ ಎನ್ನುವುದನ್ನೆ ಮರೆತ ಸೊಗಸಿನಲ್ಲಿದ್ದು, ಇದನ್ನು ನೆನೆಯದೆ ಇದ್ದೆ.

'ಅಯ್ಯೊ, ನೀನು ಇಲ್ಲಿಗೇಕೆ ಎಳೆದು ತಂದೆ? ಸತಿ, ಉತ್ತರ ಆಶಾ ಶಿಖರವನ್ನು ದಾಟುತ್ತ ಅಣ್ಣ ತಮ್ಮಂದಿರನ್ನು ನೋಡುವ ಸಂಭ್ರಮದಲ್ಲಿ ನನ್ನ ಆಶೆಯು ಗರಿಗೆದರಿ ಹಾರುತ್ತಿದೆ. ಇಂದು ನನ್ನ ಎದೆಯ ಹಕ್ಕಿ ಮದನ ಕನಕ ಪಂಜರದಿಂದ ಬಿಡುಗಡೆ ಬಯಸಿ ತುಡಿಯುತ್ತಿದೆ!

'ಸುಂದರಿ, ನಿನ್ನ ಮನೆಯೆಲ್ಲಿ? ನಿನಗೆ ತಂದೆ ತಾಯಿಯರು ಅಕ್ಕ ತಂಗಿಯರು ತಮ್ಮಂದಿರು ಬಂಧು ಬಳಗದವರಾರೂ ಇಲ್ಲವೆ? ನಿನ್ನನ್ನು ನೋಡಲು ಬಯಸುವವರು ಅಲ್ಲಿಲ್ಲವೇನು ತಿಳಿಸು? ಅಥವಾ ನೀನು ಅಪೇಕ್ಷೆಪಟ್ಟು ನೋಡಬೇಕಾದವರು ಅಲ್ಲಿಲ್ಲವೇನು?'

ಎಂದು ಪ್ರಶ್ನಿಸಿದ ಅರ್ಜುನನ ಮಾತು ಕಿವಿಗೆ ಬಿದ್ದೊಡನೆ, ಚಿತ್ರಾಂಗಿಯು ರತಿಪತಿ ಕಾಮದೇವನು ನೀಡಿದ್ದ ಅವಧಿ ಕೊನೆಮುಟ್ಟಿತು ಎಂದು ತಿಳಿದು ನಿಟ್ಟುಸಿರು ಬಿಟ್ಟಳು. ತುಂಬಾ ದುಃಖದಿಂದ ಕಂಠ ಬಿಗಿದು ಬರಲು ಹೀಗೆ ನುಡಿ ಹೊಮ್ಮಿಸಿದಳು:

## ನಿನ್ನೆದೆಯೊಲ್ಮೆ ಕಾಣುತಿಹ ಸವಿಗನಸು

'ಹೃದಯೇಶ್ವರಾ, ಇಂದಿಗೆ ನನ್ನ ಬಗ್ಗೆ ಬೇಸರಗೊಂಡೆಯೇನು? ನಿನಗಿಂದು ದಣಿವಾಯಿತೆ? ಇರು, ಇನಿಯ ನಾಳೆ ಮುಂಬೆಳಗಿನಲ್ಲಿ ನಾನು ಇಲ್ಲವಾಗುವೆ! ಕನಕ ಪಂಜರದಿಂದ ಹೃತ್ಪಕ್ಷಿ ಮುಕ್ತಿ ಪಡೆಯುತ್ತದೆ! ನನಗೆ ಮನೆಯಿಲ್ಲ, ಹೆಸರಿಲ್ಲ. ನಾನೊಂದು ಕನಸು. ನಿನ್ನ ಎದೆಯ ಪ್ರೀತಿಯನ್ನು ಕಾಣುತ್ತಿರುವ ಸವಿಗನಸು. ನೀನು ನಾಳೆ ನಿದ್ದೆಯಿಂದ ಎಚ್ಚೆತ್ತು ನೋಡುವಷ್ಟರಲ್ಲಿ ಈ ಮಾಯೆ ಒಡೆದು ಹೋಗುವುದು! ಅದುವರೆಗೆ ಈ ಹೂವನ್ನು ನಿನ್ನ ಮಾಲೆಯಲ್ಲಿ ಧರಿಸು ಪ್ರಾಣೇಶ!

'ಎಷ್ಟೆಷ್ಟೊ ಹೂವುಗಳು ಇದಕ್ಕಿಂತ ಕಂಪಿನಲ್ಲಿ, ಚೆಲುವಿನಲ್ಲಿ ನೂರ್ಮಡಿಯಾದವುಗಳು ನಿನ್ನ ಹಾರದಲ್ಲಿ ಸೇರಿಕೊಂಡಿವೆ ಎನ್ನುವುದನ್ನು ನಾನು ಬಲ್ಲೆನು! ಆದರೂ ನೀನು ಆಯಾಸಗೊಂಡ ಸಮಯದಲ್ಲಿ, ಈ ಜನರಹಿತ ಕಾಡಿನಲ್ಲಿ ನಿನ್ನ ಕ್ರೀಡಾವಸ್ತುವಾಗಿದ್ದು ಬೇಸರ ಆಸರ ಕಳೆದು ನಿನ್ನೊಡನೆ ನಲಿದಾಡಿದ ಈ ದೀನ ಕಾನನ ಕುಸುಮವನ್ನು ಹೇ ಕಾಂತನೇ ಮರೆಯದಿರು; ತೊರೆಯದಿರು!' ಎಂದು ಹೇಳುತ್ತ, ಅರ್ಧಚಂದ್ರಾಕಾರದ ಹಣೆಯನ್ನು ಪಾದಕ್ಕೆ ಚಾಚಿದ ಕತ್ತಲ ಕೂದಲ ಚಿತ್ರಾಳ ಮೈಯನ್ನು ಅರ್ಜುನನು ತಬ್ಬಿಕೊಂಡನು.

ಗದ್ಗದಿತನಾಗಿ ಕರುಣಾರ್ದ್ರ ವಾಣಿಯಿಂದ, 'ಕಾಮಿನಿಯೆ, ಹಗಲು ಇರುಳನ್ನು ಎಂದಿಗೂ ಕೈ ಬಿಡದು. ಉದಯ ಅಸ್ತದ ಹಸ್ತ ಸಂಸರ್ಗದಿಂದ ಪೃಥ್ವಿಯನ್ನು ಶಾಶ್ವತ ರಾಸಕ್ರೀಡೆಯಿಂದ ದಿನ ದಿನವೂ ಸುತ್ತುವರು! ಹಾಗೆಯೇ ನಾವಿಬ್ಬರು! ನಿನಗೇಕೆ ಚಿಂತೆ ಸಖಿ?' ಎಂದು ಹೇಳಿದನು.

ಅದನ್ನು ಕೇಳುತ್ತ ಚಿತ್ರಾಂಗದೆಯ ಕಣ್ಣಿನಿಂದ, ಕಮಲ ಪುಷ್ಪದಿಂದ ಶಿಶಿರ ಬಿಂದು ಜಿನುಗಿ ಬೀಳುವ ರೀತಿಯಲ್ಲಿ ಕಂಬನಿಗಳು ಹನಿ ಹನಿ ಮುತ್ತು ಮುತ್ತಾಗಿ ಉರುಳಿದುವು. ಶುಭ ಶರೀರದ ಹರಿಣ ನೇತ್ರೆ ಹೀಗೆ ನುಡಿದಳು:

'ಪೃಥಿವೀಂದ್ರ, ರತಿಪತಿಯ ವರ ಮಹಿಮೆ ಯಿಂದಾದ ಈ ಸೌಂದರ್ಯವು ನಾಳೆ ನಶಿಸುವುದು! ನಾನು ಋತುರಾಜ ವಸಂತನು ತೊರೆದ ಕಾನನ ಸಮೂಹದಂತಾಗುವೆನು. ನೀನು ಹಿಂದೆ ಕಿರಾತ ಕನ್ಯೆಯೆಂದು ನೂಕಿದ ರೀತಿ ಇನ್ನೊಮ್ಮೆ, ಮಾಯೆಯಿಂದ ವ್ರತವನ್ನು ಕೆಡಿಸಿದ ಶಾಕಿನಿಯೆಂದು ನಿಂದಿಸುವೆ!

'ಓಹ್ ನನ್ನ ಪ್ರಿಯನೆ, ನೀನು ಇಲ್ಲಿಗೆ ಬಂದ ಆ ಪ್ರಥಮ ರಾತ್ರಿಯಲ್ಲಿ ಚಂದ್ರನ ತಂಪಾದ ಕಿರಣಗಳಿಂದ ಮಿಂದ ಕಾಂತಿಯುತ ಬಿಳಿಯ ಮುಗಿಲುಗುಂಪು ರಾರಾಜಿಸುತ್ತಿತ್ತು. ಆ ಪ್ರಕಾಶಮಯ ವಾತಾವರಣದಲ್ಲಿ ವೃಕ್ಷದ ಅಡಿಯಲ್ಲಿ ಅಗ್ನಿಯ ಮುಂದೆ ನೀನು ಕುಳಿತಿದ್ದೆ. ಆ ಸ್ಥಳಕ್ಕೆ ಬಂದ ಲಜ್ಜೆಯಿಲ್ಲದ ನಿಶಾಚರಿಯನ್ನು ನೆನೆ! ನಿನ್ನಿಂದ ತಿರಸ್ಕೃತಳಾದ ಎಳೆಯ ಪ್ರಾಯದ ನಾಚಿಕೆ ರಹಿತ ಧೂರ್ತೆ ಆ ಕಿರಾತೆ ನಾನೆ!

'ಶ್ರೀ ಮದನನ ಕೃಪೆಯಿಂದ ನಿನ್ನ ಹೃದಯವನ್ನು ಒಂದು ತಿಂಗಳವರೆಗೆ ಗೆದ್ದು, ಸ್ವರ್ಗವನ್ನೇ ಸೂರೆಗೊಂಡವಳು ನಾನು. ಪ್ರಿಯಕರನೆ, ಇವಳನ್ನು ಪಾಪಿಯೆಂದು ಕೋಪಿಸಿಕೊಳ್ಳದೆ ಕಾಪಾಡು. ನನ್ನ ಎದೆಯು ಅಮಂಗಲದ ಭೀತಿಯಿಂದ ಕಂಪಿಸುತ್ತಿದೆ!'

ಕಥೆ ಕೇಳುತ್ತ ಆಶ್ಚರ್ಯ ಚಕಿತನಾದ ಕಿರೀಟಿಯು ನಗುಮುಖದವನಾಗಿ ರಮಣಿಯನ್ನು ಸಂತೈಸುತ್ತಿದ್ದನು. ಆಗ ದೂರ ಬಹುದೂರ ಕಂದರ ಪ್ರಾಂತದಲ್ಲಿ ಪೂರ್ವದಿಕ್ಕಿನ ಕಡೆಯಲ್ಲಿ ಮೆಲ್ಲ ಮೆಲ್ಲನೆ ಕತ್ತಲೆಯು ದಟ್ಟೈಸುತ್ತಿತ್ತು. ಅದರ ಮಬ್ಬಿನಲ್ಲಿ ದೀಪಮಾಲೆ ಮಿರುಗಿದುವು. ಅದು ಕಾರ್ಗತ್ತಲೆಯ ಗರ್ಭದಲ್ಲಿ ಒತ್ತಾದ ಮರಗಿಡಗಳು ಮಸಿ ಮುದ್ದೆಯಾಗಿರುವ ಮೌನದ ಏಕಾಂತದಲ್ಲಿ ಲಕ್ಷೋಪಲಕ್ಷ ಮಿಂಚುಹುಳ ಸಂಕುಲ ರಾಶಿ ರಾಶಿ ಮೆರೆಯುವಂತಿತ್ತು. ಜೊತೆಗೆ ಅಮಾವಾಸ್ಯೆಯ ಆಗಸದ ಅಮೃತ ಪಥದಲ್ಲಿ ಹೊಳೆಯುವ ತಾರಾ ಸಮುದಾಯದ ದೊಡ್ಡ ಗುಂಪಾಗಿ ಕಾಣುತ್ತಿತ್ತು!

ಮಣಿಪುರದ ಭೂಪಾಲ ಚಿತ್ರವಾಹನ ತನಯೆ ಚಿತ್ರಾಂಗದೆ ಆ ದೀಪ ಸಮೂಹವನ್ನು ಕುತೂಹಲದಿಂದ ನೋಡುತ್ತ ಪ್ರಶ್ನಿಸಿದ ಇಂದ್ರಪುತ್ರನಿಗೆ ತರುಣಿ ನಗುತ್ತ, 'ಮಣಿಪುರದ ರಾಜ ಚಿತ್ರವಾಹನನ ಮಗಳು, ರಾಜಕುಲದ ಮಹಾವೀರೆ ಚಿತ್ರಾಂಗದೆಯು ಬಿಟ್ಟ ಸೈನ್ಯದ ಶಿಬಿರದಲ್ಲಿ ದೀಪಗಳು ಜ್ವಲಿಸುತ್ತಿವೆ!' ಎಂದು ಹೇಳಲು, ಆ ಕ್ಷಾತ್ರರಮಣಿಯ ತೇಜದ ಪ್ರಗತಿಯ ಕಥೆಯನ್ನು ಕೇಳುವ ಉತ್ಕಟ ಇಚ್ಛೆಯನ್ನು ಕುಂತಿಯ ಪುತ್ರನು ವ್ಯಕ್ತಪಡಿಸಿದನು. ಚಿತ್ರಾಳು ತನ್ನ ಕಥೆಯನ್ನು ಪಾರ್ಥನಿಗೆ ರೋಮಾಂಚನ ಉಂಟಾಗುವಂತೆ ಹೇಳಿದಳು.

ಸತಿ ಹೇಳುತ್ತಿದ್ದು ಅರ್ಜುನನು ಕೇಳುತ್ತಿರುವಾಗ ತ್ರಿಲೋಕವನ್ನು ಅಲುಗಿಸುವ ರಕ್ಕಸ ಗಾಳಿಯೊಂದು ಎದ್ದಿತು. ಅದು ಪ್ರಲಯದ ಬಿರುಗಾಳಿಯೆಂಬಂತೆ ಬೆಟ್ಟ ಕಾಡುಗಳನ್ನು ಅಪ್ಪಳಿಸಿ ನಾಶದಾವೇಶದಿಂದ ಬೀಸಿತು. ಪರ್ವತವೆ ತಲೆ ಅಲುಗಾಡಿಸುತ್ತಿದೆಯೊ ಎನ್ನುವಂತೆ ಮರಗಳ ಗುಂಪು ಎಡಬಲಕ್ಕೆ ತೂಗಿತು.

(ಸಶೇಷ)